ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಛೇರಿಗಳು,ನೃಪತುಂಗ ರಸ್ತೆ,ಬೆಂಗಳೂರು -560001

ಸಂಖ್ಯೆ:ಸಿ7(8)ಪ್ರಾಶಿಅಆರ್.ಟಿ.ಇ ಆನ್‌ಲೈನ್ ದಾಖಲಾತಿ/2014-15 ದಿನಾಂಕ:16-01-2015

## : :ಜ್ಞಾಪನಾ: :

**ವಿಷಯ: 2015-16 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ ಪ್ರವೇಶ ಪ್ರಕ್ರಿಯೆ ಬಗ್ಗೆ.**

**ಉಲ್ಲೇಖ: ದಿನಾಂಕ: 14.01.2015 ರಂದು ಆಯುಕ್ತರ ಸಮ್ಮುಖದಲ್ಲಿ ನಡೆದ ಸಭೆ.**

*********

ಶಿಕ್ಷಣ ಹಕ್ಕು ಕಾಯಿದೆ ಅಡಿ 2015-16ನೇ ಸಾಲಿನ ಪ್ರವೇಶ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತಿದ್ದು, ಈಗಾಗಲೇ ವೇಳಾಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ.

ನೆರೆಹೊರೆಗೆ ಸಂಬಂಧಿಸಿದಂತೆ ನಗರ ಪ್ರದೇಶದಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ವಾಸವಾಗಿರುವವರು ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಂಬಂಧಿಸಿದ ಕಂದಾಯ ಗ್ರಾಮದ ವ್ಯಾಪ್ತಿಯೊಳಗೆ ವಾಸಿಸುವವರು ಶಿಕ್ಷಣ ಹಕ್ಕು ಕಾಯಿದೆ ಅಡಿ ಪ್ರವೇಶ ಕೋರಿ ಅರ್ಜಿ ಸಲ್ಲಿಸಲು ಕೈಪಿಡಿಯಲ್ಲಿ ಸೂಚನೆ ನೀಡಲಾಗಿದೆ. ಕೈಪಿಡಿಯ ಪ್ರತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಕೆಲವು ಪೋಷಕರು ಅವರು ವಾಸಿಸುವ ನೆರೆಹೊರೆಯ ವ್ಯಾಪ್ತಿಯಲ್ಲಿ ಅನುದಾನರಹಿತ ಶಾಲೆಗಳು ಇಲ್ಲದಿರುವ ಕಾರಣ ಪಕ್ಕದ ವಾರ್ಡ್ ಅಥವಾ ಕಂದಾಯ ಗ್ರಾಮದಲ್ಲಿರುವ ಶಾಲೆಗೆ ಶಿಕ್ಷಣ ಹಕ್ಕು ಕಾಯಿದೆ ಅಡಿ ಪ್ರವೇಶ ಕೋರಿ ಅರ್ಜಿ ಸಲ್ಲಿಸಲು ವಿನಂತಿಸಿರುತ್ತಾರೆ. ಕೆಲವು ವಾರ್ಡ್‌ಗಳಲ್ಲಿ ಅನುದಾನರಹಿತ ಶಾಲೆಗಳು ಇರುವುದಿಲ್ಲ. ಅದೇ ರೀತಿ ಎಲ್ಲಾ ಕಂದಾಯ ಗ್ರಾಮಗಳಲ್ಲಿ ಅನುದಾನರಹಿತ ಶಾಲೆಗಳು ಇರುವುದಿಲ್ಲ. ಆದ ಕಾರಣ ಅಂತಹ ಸಂದರ್ಭಗಳಲ್ಲಿ ನೆರೆಹೊರೆಯ ವ್ಯಾಪ್ತಿಯನ್ನು ಪಕ್ಕದ ವಾರ್ಡ್ ಅಥವಾ ಪಕ್ಕದ ಕಂದಾಯ ಗ್ರಾಮದಲ್ಲಿ ಇರುವ ಅನುದಾನರಹಿತ ಶಾಲೆಗಳಿಗೆ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

"ಶಾಲೆಗಳ ಸಂಖ್ಯೆ- 0" ಇರುವ ವಾರ್ಡ್/ ಕಂದಾಯ ಗ್ರಾಮಗಳ ನೆರೆಹೊರೆಯ 2 ವಾರ್ಡ್‌ಗಳಲ್ಲಿ ಹೆಚ್ಚು ಶಾಲೆಗಳಿರುವ ವಾರ್ಡ್/ಕಂದಾಯ ಗ್ರಾಮಗಳನ್ನು ಗುರುತಿಸಿ ತಂತ್ರಾಂಶದಲ್ಲಿ ಅಳವಡಿಸುವ (ಮ್ಯಾಪಿಂಗ್) ಬಗ್ಗೆ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಇ-ಮೇಲ್ ವಿಳಾಸ: softwaredevelopmentcenter@gmail.com ಕ್ಕೆ ತುರ್ತಾಗಿ ಸಲ್ಲಿಸುವುದು. ತಪ್ಪಿದಲ್ಲಿ ಈ ಬಗ್ಗೆ ಯಾವುದೇ ಲೋಪದೋಷಗಳಿಗೆ ಸಂಬಂಧಿಸಿದಂತೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಈಗಾಗಲೇ ಶಾಲೆಗಳ ಹೆಸರು/ ಗುರುತಿಸಲಾದ ಸೀಟುಗಳ ವಿವರದ ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿದೆ. **ಅದರಂತೆಯೇ 2015-16ನೇ ಸಾಲಿನ ದಾಖಲಾತಿ ಪ್ರಕ್ರಿಯೆ ಕೈಗೊಳ್ಳುವುದು. ಉಳಿದಂತೆ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.**

(ಮೊಹಮ್ಮದ್ ಮೊಹಸಿನ್, ಭಾಆಸೇ)

ಆಯುಕ್ತರು

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರಿಗೆ, (ಸೂಕ್ತ ಕ್ರಮಕ್ಕಾಗಿ)
2. ರಾಜ್ಯದ ಎಲ್ಲಾ ವಲಯಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರ ಮೂಲಕ) ಸೂಕ್ತ ಕ್ರಮಕ್ಕಾಗಿ

ಪ್ರತಿಗಳು

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ಅಪರ ಆಯುಕ್ತರು, ಧಾರವಾಢ ಮತ್ತು ಗುಲ್ಬರ್ಗಾ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ.
3. ಇ-ಆಡಳಿತ ಶಾಖೆಗೆ ವೆಬ್-ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.